ಕೋಮು ಗಲಭೆಗಳಲ್ಲಿ ನೊಂದವರ ಬಗ್ಗೆ

1354 – ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) ; ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಕೋಮು ಗಲಭೆಗಳಲ್ಲಿ ಹಾನಿಗೊಳಗಾದವರಿಗೆ ಪರಿಹಾರವನ್ನು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಾವಾಗ ಪಾವತಿ ಮಾಡಲಾಗುತ್ತದೆ;

ಇ) ಇತ್ತೀಚಿನ ಕೋಮು ಗಲಭೆಗಳಲ್ಲಿ ಮನೆಗಳನ್ನು ಕಳೆದುಕೊಂಡ ಸಂತ್ರಸ್ಥರಿಗೆ ಹೊಸ ಮನೆಗಳನ್ನು ನಿರ್ಮಿಸುವ ಬಗ್ಗೆ ಯಾವ ರೀತಿಯ ಕ್ರಮಗಳನ್ನೂ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್, (ಗೃಹ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು. ಆದರೆ ಈ ವಿಷಯವು ಸರ್ಕಾರದ ಪರಿಗಣನೆಯಲ್ಲಿದೆ.

ಶ್ರೀ ಸಾದತ್ ಆಲಿ ಖಾನ್ : ಮಾನ್ಯ ಗೃಹಸಚಿವರು answered "No" to my question" Whether it has come to the notice of Govt. that compensation has not been paid to the victims of the recent communal clashes, if so, why?"

ರಾಮನಗರದಲ್ಲಿ ಕೋಮುಗಲಭೆ ಎರಡನೇ ಸೆಪ್ಟೆಂಬರ್ ತಿಂಗಳಲ್ಲಿ ಆಗಿದ್ದು ಅಲ್ಲಿ 49 ಮನೆಗಳು ಸುಟ್ಟುಹೋಗಿವೆ. ಆ ಮನೆಗಳಲ್ಲಿದ್ದವರು ಇನ್ನೂ ಕೂಡ ಶಾಲೆಗಳಲ್ಲಿ, ಅಥವಾ ಅವರವರ ಸಂಬಂಧಿಕರ ಮನೆಗಳಲ್ಲಿ ವಾಸವಾಗಿದ್ದಾರೆ. ಆ ದಿವಸಗಳಲ್ಲಿ ಆಗಿನ ಮುಖ್ಯಮಂತ್ರಿಯವರು promised to construct the houses.

ಆದರೆ ಇದುತನಕ ಆ ಮನೆಗಳ ಕೆಲಸ ಮುಗಿದಿಲ್ಲ; ಅದೇ ರೀತಿಯಲ್ಲಿದೆ ಮತ್ತೆ ಚನ್ನಪಟ್ಟಣದಲ್ಲಿ 158 ಮನೆಗಳು, ಎಂ.ಕೆ. ದೊಡ್ಡಿಯಲ್ಲಿ 29 ಮನೆಗಳು ಸುಟ್ಟು ಹೋಗಿದ್ದು ಆ ಜನರು ಕೂಡ ಇಂದಿಗೂ ಶಾಲೆಗಳಲ್ಲಿ ಮತ್ತು ಅಲ್ಲಲ್ಲಿ ವಾಸವಾಗಿದ್ದಾರೆ. ಸರಕಾರದವರು ನೊಂದವರಿಗೆ 20 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಏನು ಹೇಳಿದ್ದಾರೆ, ಆ ಹಣವು ಕೂಡ ಇನ್ನೂ ರಿಲೀಸ್ ಆಗಿಲ್ಲ. ಪ್ರಶ್ನೆ ಮೂಲಕ ಗೃಹಮಂತ್ರಿಯವರಿಗೆ ಪರಿಹಾರ ಮಾಡದಿರುವ ಬಗ್ಗೆ ಸರಕಾರಕ್ಕೆ ತಿಳಿದು ಬಂದಿದೆಯೇ ಎಂದು ಕೇಳಿದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಕೂಡ ಈ ಬಗ್ಗೆ ಐಪಾರು ಅರ್ಜಿಗಳನ್ನು ಸರಕಾರಕ್ಕೆ ಸಲ್ಲಿಸಿದ್ದೇನೆ. ಇನ್ನು ಗಾರ್ಡನ್‌ಗಳ ವಿಚಾರದಲ್ಲಿ, assessment of gardens, assessment of buunt vehicles, mosques and Edigahes

ಹಾನಿಗೊಳಗಾದ ಮಸೀದಿ ಮತ್ತು ಈದ್ಗಾಗಳ ವಿಚಾರದಲ್ಲಿಯೂ ಕೂಡ ಇನ್ನೂ ಸೂಕ್ತ ಕ್ರಮ ಜರುಗಿಸಿಲ್ಲ. ಪವಿತ್ರ ದಿನಗಳಾದ ರಮ್ಜಾನ್ ಕೂಡ ಇನ್ನು ಶುರುವಾಗುತ್ತದೆ. ಕ್ರಮ ಜರುಗಿಸಿಲ್ಲ. ಆದರೂ ಕೂಡ ಮಸೀದಿ ಮತ್ತು ಈದ್ಗಾಗಳು ರಿಪೇರಿ ಮಾಡಿಕೊಟ್ಟಿಲ್ಲ. ತಾವು ಸ್ಥಳಕ್ಕೆ ಹೋದರೆ ಅಲ್ಲಿಯ ಜನರು ನಮ್ಮನ್ನು ಕೇಳುತ್ತಾರೆ. ಗೇರಾವ್ ಮಾಡುತ್ತಾರೆ. ನಾವು ಅವರಿಗೆ ಯಾವ ರೀತಿಯ ಉತ್ತರಗಳನ್ನು ಕೊಡುವುದು? ಆದುದರಿಂದ ಮಾನ್ಯ ಗೃಹಸಚಿವರು ಈ ಕೆಲಸಗಳನ್ನು ಯಾವಾಗ ಮಾಡಿ ಮುಗಿಸುತ್ತೀರಿ ಎಂದು ಉತ್ತರ ಕೊಡಬೇಕು ಮತ್ತು ರಾಜ್ಯದಲ್ಲಿ ಒಟ್ಟು 242 ಮಸೀದಿಗಳು ಸುಟ್ಟುಹೋಗಿವೆ ಅಥವಾ ಡ್ಯಾಮೇಜ್ ಆಗಿವೆ ಎಂದು ತಿಳಿದು

ಬರುತ್ತದೆ. Sir, Ramzan is fast approaching. The Govt. should take immediate action to reconstruct the mosques, Edgahs and burnt houses.

ರಮ್ಜಾನ್ ತಿಂಗಳಲ್ಲಿ ನಮ್ಮ ಜನರು ಅಲ್ಲಿಗೆ ಪ್ರಾರ್ಥನೆಗೆ ಹೋಗಬೇಕಾಗುತ್ತದೆ. ಇದೆಲ್ಲವನ್ನು ಗಮನಿಸಿ ಸರ್ಕಾರದವರು ಈ ದಿಶೆಯಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್‌ನಾರಾಯಣಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಚಿನ್ನಪಟ್ಟಣ ಮತ್ತು ರಾಮನಗರಗಳಿಗೆ ನಾನು ಕೂಡ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಹೋಗಿದ್ದಾಗ ಸುಟ್ಟು ಹೋದ ಮನೆಗಲಿಗೆ ಬದಲಾಗಿ ಪಕ್ಕಾ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಕ್ಯಾಬಿನೆಟ್ ಸಬ್‌ಕಮಿಟಿಯೊಂದನ್ನು ರಚಿಸಲಾಗಿದ್ದು ಅದರಲ್ಲಿ ಮಾಡಿದ ಶಿಫಾರಸ್ಸುಗಳು ಸಂಪುಟದ ಮುಂದೆ ಬಂದು ಒಂದು ತೀರ್ಮಾನವನ್ನು ತೆಗೆದುಕೊಂಡು ಕೂಡಲೇ ಮನೆಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಸಾದತ್ ಅಲಿಖಾನ್ : ಈಗ ಕಾಂಪನ್ಸೇಷನನ್ನು ಕೊಡುವಾಗ ಒಂದು ಲಕ್ಷ ಆಸ್ತಿ ಲಾಸ್‌ಆಗಿದ್ದರೆ ಅವರಿಗೆ 20 ಸಾವಿರ ರೂ.ಪರಿಹಾರ ಸಿಗುತ್ತದೆ. The ratio is not changed for Rupees One lakh or Rupees Twenty Lakhs loss of property. Even for the loss of property worth Rs.20 lakhs, Rs.44,000 is given as compensation

Therefore the Government Order in this regard should be amended & see that the loss should be compensated proportionately.

ಅದಕ್ಕಾಗಿ ಗವರ್ನಮೆಂಟಿನವರು ಇದಕ್ಕೆ ಅಮೆಂಡ್ಮೆಂಟ್ಮಾಡಬೇಕು. ಏಕೆಂದರೆ ಒಂದು ಲಕ್ಷ ಲಾಸಾಗಿರುವವನಿಗೆ 44 ಸಾವಿರ ಸಿಕ್ಕಿದರೆ 20 ಲಕ್ಷ ಲಾಸಾಗಿರುವವನಿಗೂ 44 ಸಾವಿರವೇ ಸಿಗುವುದು. ಅದಕ್ಕಾಗಿ I once again request that the Govt.Order should be amedded suitably. ಆ ರೀತಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಸರ್ಕಾರ ಈಗಾಗಲೇ 1 ಕೋಟಿ 96 ಲಕ್ಷ ಪರಿಹಾರವಾಗಿ ಕೊಟ್ಟಿದೆ. ಅಲ್ಲದೆ ಎಲ್ಲೆಲ್ಲಿ ಪ್ರಾಪರ್ಟಿ ಲಾಸಾಗಿದೆ ಎಂದು ಸರ್ಕಾರಕ್ಕೆ ತಿಳಿದುಬಂದಿದೆ. ಅದಕ್ಕಾಗಿ ಕ್ಯಾಬಿನೇಟ್ ಸಬ್‌ಕಮಿಟಿಯಲ್ಲಿ 50 ಸಾವಿರ ರೂ.ಗಳನ್ನು ಇಂಟರೆಸ್ಟ್ ಫ್ರೀ ಲೋನನ್ನು ಬ್ಯಾಂಕ್‌ಗಳಿಂದ ಗ್ಯಾರೆಂಟಿ ಕೊಟ್ಟು ಕೊಡಿಸಲು ನಿರ್ಧಾರ ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ 10 ಲಕ್ಷ 20 ಲಕ್ಷ ಲಾಸಾಗಿದೆಯೋ, ಅಂತಹ ಕಡೆಯಲ್ಲಿ ಪರಿಹಾರವನ್ನು ಯಾವ ರೀತಿ ಕೊಡಿಸಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಈ ಸೋಮವಾರ ಸಬ್ ಕಮಿಟಿಯಲ್ಲಿ ಕೊನೆಯದಾಗಿ ನಿರ್ಧಾರ ತೆಗೆದುಕೊಂಡು ನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಪರಿಹಾರ ಕೊಡುವುದು, ಮನೆ ಕಟ್ಟಿಸಿಕೊಡುವುದು ಒಂದು ಭಾಗ, ಆದರೆ ಎರಡು ಕೋಮುಗಳಲ್ಲಿ ಆಗಿರುವ ಘರ್ಷಣೆಯನ್ನು ತಪ್ಪಿಸಿ ಸಾಮರಸ್ಯ ಕಾಪಾಡಿಕೊಂಡು ಬರುವುದು ಇನ್ನೊಂದು ಭಾಗ ನನ್ನ ಮಾಹಿತಿಯಂತೆ ರಾಜ್ಯಾದ್ಯಂತ ಉರಿದ ಗಾಯದ ಮೇಲೆ ಉಪ್ಪು ಹಾಕುವಂತೆ ನೊಂದಿರುವ ಜನರ ವಿರುದ್ಧವೇ ಕೇಸ್ ಬಹುತೇಕ ದಾಖಲಾಗಿವೆಯೆಂದು, ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಸುಮಾರು 400 ಎಕರೆ ಮಾವಿನ ತೋಪು ಯಾರು ಕಳೆದುಕೊಂಡಿದ್ದಾರೋ ಅವರ ವಿರುದ್ಧವೇ ಸುಮಾರು 320

ಕೇಸ್ಗಳನ್ನು ಹಾಕಿದ್ದಾರೆಂದು ನನಗೆ ವರದಿ ಬಂದಿದೆ. ದಯವಿಟ್ಟು ಗೃಹಸಚಿವರು ಖುದ್ದು ಇದನ್ನು ಪರಿಶೀಲನೆ ಮಾಡಿ ಎಲ್ಲೆಲ್ಲಿ ಈ ತರಹ ಅಮಾಯಕರ ವಿರುದ್ಧ ಕೇಸ್ ಹಾಕಿ ಕೋರ್ಟಿಗೆ ಎಳೆಯುತ್ತಿರುವುದನ್ನು ತಪ್ಪಿಸಲು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಧರ್ಮಸಿಂಗ್ : ಪರಿಶೀಲನೆ ಮಾಡುತ್ತೇನೆ. ಇದನ್ನು ಕೂಡ ಸಂಪುಟ ಸಭೆಯಲ್ಲಿ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಪೋಲೀಸ್ ಇಲಾಖೆಯ ಸಿಬ್ಬಂದಿ ಬಗ್ಗೆ.

1366 – ಪಿ.ಜಿ.ಆರ್. ಸಿಂಧ್ಯ (ಕನಕಪುರ), ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪೇದೆಗಳ ಮತ್ತು ಮುಖ್ಯ ಪೇದೆಗಳ ಸಂಖ್ಯೆ ಎಷ್ಟು?

ಆ) ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು?

ಇ) ಮಹಿಳಾ ಪೇದೆಗಳು ಎಷ್ಟು ಜನ ಇದ್ದಾರೆ.

ಈ) ಮಹಿಳಾ ಪೇದೆಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಶ್ರೀ ಧರ್ಮಸಿಂಗ್, (ಗೃಹ ಸಚಿವರು)

ಅ) ಸಶಸ್ತ್ರ ಪಡೆಯು ಸೇರಿದಂತೆ ಪ್ರಸ್ತುತ ಕೆಲಸ ಮಾಡುತ್ತಿರುವ ಪೋಲೀಸ್ ಪೇದೆಗಳು 32,746 ಮತ್ತು ಮುಖ್ಯ ಪೇದೆಗಳು 9,744

ವಿವರ ಕೆಳಕಂಡಂತೆ ಇದೆ :

1.	ಸಿವಿಲ್ ಮುಖ್ಯ ಪೇದೆಗಳು	6,963
2.	ಸಿವಿಲ್ ಪೋಲೀಸ್ ಪೇದೆಗಳು	21,094
3.	ಸೆಶಸ್ತ್ರ ಮುಖ್ಯ ಪೇದೆಗಳು	2,782
4.	ಸಶಸ್ತ್ರ ಪೊ. ಪೇದೆಗಳು	11,652

ಆ) ಇವರಲ್ಲಿ 6,908 ಪರಿಶಿಷ್ಟ ಜಾತಿಗೂ 531 ಪರಿಶಿಷ್ಟ ವರ್ಗಕ್ಕೂ ಸೇರಿದವರಾಗಿದ್ದಾರೆ.

ವಿವರ ಕೆಳಕಂಡಂತೆ ಇದೆ.

	ಪ.ಜಾ	ಪ.ವರ್ಗ
ಸಿವಿಲ್ ಮುಖ್ಯ ಪೇದೆ	800	86
ಸಿವಿಲ್ ಪೋಲೀಸ್ ಪೇದೆ	3512	353
ಸಶಸ್ತ್ರ ಮುಖ್ಯ ಪೇದೆ	403	23
ಸಶಸ್ತ್ರ ಪೊ.ಪೇದೆ	2233	169

ಇ) ಪ್ರಸ್ತುತ 50 ಮಹಿಳಾ ಮುಖ್ಯ ಪೇದೆಗಳು ಮತ್ತು 251 ಮಹಿಳಾ ಪೋಲೀಸ್ ಪೇದೆಗಳು ಇದ್ದಾರೆ.

ಈ) ಹೌದು

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪೋಲೀಸ್ ಇಲಾಖೆಯಲ್ಲಿನ ಮಹಿಳಾ ಪೋಲೀಸರ ಸಂಖ್ಯೆ ಬಹಳ ಕಡಿಮೆ ಇದ್ದು, ರಾಜ್ಯದಲ್ಲಿ ವಿಶೇಷವಾಗಿ ಕೋಮುಗಲಭೆಗಳು, ದರೋಡೆಗಳು ಹೆಚ್ಚುತ್ತಿರುವುದರಿಂದಾಗಿ ಆದಷ್ಟು ಬೇಗ ಇವರ ಸಂಖ್ಯೆ ಹೆಚ್ಚು